**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
<u>ಸಿ.ಸಿ.ನಂ</u>**<u>. 1138/2025</u>**

ದಿನಾಂಕ: **22.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ರಾಜಪ್ಪ | ಚಾಸಾ-12, ಪ್ರಾಸ-8 |
| ತಂದೆಯ ಹೆಸರು | ಮಲ್ಲಪ್ಪ | |
| ವಯಸ್ಸು | 65 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಯಳವರಹಟ್ಟಿ | |

<u>ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:</u>

ಮೃತ ವ್ಯಕ್ತಿ ನನ್ನ ಮಗ. ಆತನಿಗೆ ದಿ: 29.09.2024 ರಂದು ಹಿರಿಯಂಗಳ ರಸ್ತೆಯಲ್ಲಿ ಅಪಘಾತವಾಗಿತ್ತು. ಅಪಘಾತವಾದ ಸಮಯದಲ್ಲಿ ನಾನು ನನ್ನ ಮನೆಯಲ್ಲಿ ಇದ್ದೆ. ಈ ವಿಚಾರವನ್ನು ಚಾಸಾ-1 ರವರು ನನಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನನ್ನನ್ನು ಬೀರೂರು ಆಸ್ಪತ್ರೆಗೆ ಕರೆದ ಮೇರೆಗೆ ನಾನು ಬೀರೂರು ಆಸ್ಪತ್ರೆಗೆ ಹೋಗಿ ನೋಡುವಷ್ಟರಲ್ಲಿ ನನ್ನ ಮಗನನ್ನು ಶಿವಮೊಗ್ಗ ಆಸ್ಪತ್ರೆಗೆ ವರ್ಗಾಯಿಸುತ್ತಿದ್ದರು. ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗುತ್ತಿರುವಾಗ ರಸ್ತೆ ಮಧ್ಯೆ ನನ್ನ ಮಗ ಮೃತ ಪಟ್ಟ ಕಾರಣ ಅವರನ್ನು ಪುನಃ ಬೀರೂರು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಬೀರೂರು ಆಸ್ಪತ್ರೆಯಲ್ಲಿ ನನ್ನ ಸಮಕ್ಷಮ ಶವ ಪಂಚನಾಮೆಯನ್ನು ಜರುಗಿಸಿರುತ್ತಾರೆ ಹಾಗೂ ಛಾಯಾಚಿತ್ರ ತೆಗೆಸಿರುತ್ತಾರೆ. ಶವಪಂಚನಾಮೆ ಸಮಯದಲ್ಲಿ ತೆಗೆಯಲಾದ ಎರಡು ಛಾಯಾಚಿತ್ರಗಳನ್ನು ನಿಪಿ-33 ಮತ್ತು 34 ಎಂದು ಗುರುತಿಸಲಾಯಿತು.

ನಂತರ ದಿ: 23.10.2024 ರಂದು ಪೋಲಿಸರು ನನ್ನನ್ನು ಸ್ಥಳ ಮಹಜರ್ ಗೆ ಕರೆದುಕೊಂಡು ಹೋಗಿದ್ದು ಚಾಸಾ-3 ಮತ್ತು 4 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಮಧ್ಯಾಹ್ನ 12.00 ರಿಂದ 12.30 ರವರೆಗೆ ನಿಪಿ-4 ರಂತೆ ಸ್ಥಳ ಮಹಜರ್ ಜರುಗಿಸಿರುತ್ತಾರೆ. ಸಾಕ್ಷಿ ನಿಪಿ-4 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಡಿ) ಎಂದು ಗುರುತಿಸಲಾಯಿತು. ಸ್ಥಳ ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-6 ರಿಂದ 9 ರ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಪೋಲಿಸ್ ಠಾಣೆಗೆ ಹೋಗಿ ನಾನು ತೋರಿಸಿದ ಮೇರೆಗೆ ಚಾಸಾ-3 ಮತ್ತು 4 ರ ಸಮಕ್ಷಮ ಅಪಘಾತಕ್ಕೊಳಗಾದ ಕೆಎ-18 ಕೆ-6532 ಬೈಕನ್ನು ನಿಪಿ-5 ರಂತೆ ಮಧ್ಯಾಹ್ನ 12.45 ರಿಂದ 1.15 ರವರೆಗೆ ಮಹಜರ್ ಮೂಲಕ ಮುಂದಿನ ಕ್ರಮಕ್ಕಾಗಿ ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನಿಪಿ-5 ರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಡಿ) ಎಂದು ಗುರುತಿಸಲಾಯಿತು. ಅದೇ

ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ. ಸಾಕ್ಷಿ ನಿಪಿ-10 ಮತ್ತು 11 ರ ಛಾಯಾಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ಪಾಟೀಸವಾಲು: ಆರೋಪಿ ಪರ ವಕೀಲರಿಂದ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.